# <u>ಪ್ರಾಚೀನ ಕರ್ಮವು ಬಿಡಲರಿಯದು</u>

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 382.
2. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao, page No. 288.
3. **Note:** Lyrics given here are as per Ref. 1. The wordings in Ref. 2 are same as in Ref. 1. Singer has followed these lyrics.
4. **Note:** This song is not available in the books of Shri Betageri Krishna Sharma and Shri Bengeri Huchha Rayaru and also in the books of Samagra Dasa Sahitya, published by Kannada & Culture Dept., Govt of Karnataka, Bengaluru and also in the books of Gorebala Hanumantha Rayaru.

ರಾಗ: ಮುಖಾರಿ ತಾಳ: ಝಂಪೆ

ಪ್ರಾಚೀನ ಕರ್ಮವು ಬಿಡಲರಿಯದು
ಯೋಚನೆಯ ಮಾಡಿ ನೀ ಬಳಲ ಬೇಡ || ಪ ||

ಮುನ್ನ ಮಾಡಿದ ಕರ್ಮ ಬೆನ್ನಟ್ಟಿ ಬರುತಿರಲು
ತನ್ನಿಂದ ತಾನೆ ತಿಳಿಯಲರಿಯದೆ
ಇನ್ನು ದೇಹವನು ಆಶ್ರಯಿಸಿ ಫಲವೇನು
ಉನ್ನಂತ ಹರುಷದಲಿ ಮನದಿ ಯೋಚಿಸುವ || 1 ||

ಲೋಕಾದಿ ಲೋಕಗಳ ತಿರುಗುವ ರವಿ ರಥಕೆ
ಏಕ ಗಾಲಿಗೆ ಏಳು ಕುದುರೆ ಕಟ್ಟಿ
ಆಕಾಶ ಮಾರ್ಗದಲಿ ತಿರುಗುವ ಅರುಣನಿಗೆ
ಬೇಕಾದ ಚರಣಗಳ ಕೊಡಲಿಲ್ಲ ಹರಿಯು || 2 ||

ಸೇತುವೆಯ ಕಟ್ಟಿ ಲಂಕೆಗೆ ಹಾರಿ ಹನುಮಂತ
ಖ್ಯಾತಿಯನೆ ಮಾಡಿ ರಾವಣನ ಗೆದ್ದು
ಸೀತೆಯನು ತಂದು ಶ್ರೀ ರಾಮನಿಗೆ ಕೊಡಲಾಗಿ

ಪ್ರೀತಿಯಿಂ ಕೌಪೀನವ ಬಿಡಿಸಲಿಲ್ಲ ಹರಿಯು || 3 ||

ನಿತ್ಯದಲಿ ಗರುಡ ಸೇವೆಯ ಮಾಡಿ ವಿಷ್ಣುವನು
ಹೊತ್ತುಕೊಂಡು ಇದ್ದ ಜಗವರಿಯಲು
ಅತ್ಯಂತ ಸೇವಕನೆಂದು ಮೂಗಿನ ಡೊಂಕು
ಎತ್ತಿ ನೆಟ್ಟಗೆ ಮಾಡಲಿಲ್ಲ ಶ್ರೀ ಕೃಷ್ಣ || 4 ||

ಇಂತೆಂದು ಈ ಪರಿ ತಮ್ಮೊಳಗೆ ತಾವು ತಿಳಿದು
ಭ್ರಾಂತನಾಗದೆ ಬಯಕೆಗಳನು ಜರಿದು
ಶಾಂತ ಮೂರುತಿ ಸಿರಿ ಪುರಂದರ ವಿಠಲನ
ಸಂತತದಿ ಬಿಡದೆ ಭಜಿಸೆಲವೊ ಮನುಜ || 5 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ಅರುಣ** – ಸೂರ್ಯನ ಸಾರಥಿ, ಹೆಳವ.

**ಕೌಪೀನವ** – ಬ್ರಹ್ಮಚರ್ಯವನ್ನು.

**Classification:** Keerthane
**Ankita:** siri purandara vittala
**Location:** NA
**Category:** vidhi chintane
**Sub-Category:** prachina, karma, deha, phala, santosha, loka, surya, kudure, akasha, dari, aruna, Krishna, garuda, Vishnu, moogu, donku, bhajane,
**Pravachana:** NA
**Explanation:** NA